# ECCE UKG

# TRAINING

# DIET MANGALORE

## DATE 07.03.2022 - 11.03.2022



ದಿನಾಂಕ 7.3.2022 ರಂದು ಪೂರ್ವಬಾಲ್ಯ ಆರೈಕೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೆ ಪಿ ಎಸ್ ಶಾಲೆಯ ಮತ್ತು ಎಸ್ ಡಿ ಎಂ ಸಿ ಅವರು ಪ್ರಾರಂಭಿಸಿರುವ ಪೂರ್ವ ಪ್ರಾಥಮಿಕ ವಿಭಾಗದ ಶಿಕ್ಷಕರಿಗೆ ನಡೆದ ತರಬೇತಿ ಯಪ್ರಾರಂಭದಲ್ಲಿ ನೋಂದಣಿ ಪುಸ್ತಕ ಪೆನ್ನು ವಿತರಣೆ ಮಾಡಲಾಯಿತು.

ತರಬೇತಿ ಉದ್ಘಾಟನೆ ಕಾರ್ಯಕ್ರಮದ ಆರಂಭದಲ್ಲಿ ಸುಗಮಕಾರರಾದ ಪುಷ್ಪಾವತಿಯವರು ಎಲ್ಲರನ್ನುಸ್ವಾಗತಿಸಿದರು. ಗಿಡಕ್ಕೆನೀರೆರೆಯುವ ಮೂಲಕ ಡಯಟ್ ಉಪನ್ಯಾಸಕರು ಹಾಗೂ ತರಬೇತಿಯ ನೋಡಲ್ ಅಧಿಕಾರಿಯಾದ ಡಾ ಸುಮಂಗಲ ಎಸ್ ನಾಯಕ ಇವರು ತರಬೇತಿ ಉದ್ಘಾಟಿಸಿ ಪ್ರಾಸ್ತವಿಕ ಮಾತನಾಡಿ ತರಬೇತಿಯ ಉಪಯುಕ್ತತೆಯ ಬಗ್ಗೆ ತಿಳಿಯಪಡಿಸಿದರು.





ಸುಗಮಕಾರರಾದ ಲಕ್ಷ್ಮಿಯವರು ಧನ್ಯವಾದವನ್ನು ಅರ್ಪಿಸಿದರು. ತದನಂತರ ಶಿಬಿರಾರ್ಥಿಗಳಿಗೆ ಪೂರ್ವ ಪರೀಕ್ಷೆಯನ್ನು ನಡೆಸಲಾಯಿತು. ತರಬೇತಿಯ ನೋಡಲ್ ಅಧಿಕಾರಿಯಾದ ಶ್ರೀಮತಿ ಡಾ ಸುಮಂಗಲ ಮೇಡಂ ಇವರು ಮೊದಲ ಅವಧಿಯಲ್ಲಿ ಪೂರ್ವಬಾವಸ್ಥೆಯ ಪ್ರಾಮುಖ್ಯತೆ ಮತ್ತು ಮೆದುಳಿನ ಬೆಳವಣಿಗೆ ಹಾಗೂ ಮಕ್ಕಳ ವ್ಯಕ್ತಿ ವಿಕಸನದಲ್ಲಿ ಅವರ ಪಾತ್ರ ಹಾಗೂ ದೈಹಿಕ, ಬೌದ್ಧಿಕ ಸಾಮಾಜಿಕ ಭಾವನಾತ್ಮಕ ಸೃಜನಾತ್ಮಕ ಮಹತ್ವವನ್ನು ಹೇಳಿರುವುದನ್ನು ಶಿಬಿರಾರ್ಥಿಗಳು ಅರ್ಥೈಸಿಕೊಂಡರು.

ಆರಂಭಿಕ ವರ್ಷಗಳಲ್ಲಿ ಮಗುವಿನ ಮೆದುಳಿನ ಬೆಳವಣಿಗೆ, ಹೇಗೆ ವಿವಿಧ ಆಯಾಮಗಳಲ್ಲಿ ಅಭಿವೃದ್ಧಿಯಾಗುತ್ತದೆ ಎಂಬುದನ್ನು ಅರ್ಥೈಸಿದರು.

**ಕಲಿಕೆ ಎಂದರೇನು? ಮಕ್ಕಳು ಹೇಗೆ ಕಲಿಯುತ್ತಾರೆ,**

ಮಕ್ಕಳಲ್ಲಿ ಆಗುವ ಬದಲಾವಣೆ ,ವರ್ತನೆ ,ಭಾವನೆ ಜ್ಞಾನ ಎಂಬುದರ ಬಗ್ಗೆ ಸವಿವರವಾದ ಮಾಹಿತಿಯನ್ನು ನೀಡಲಾಯಿತು .ನಂತರ ಊಟದ ವಿರಾಮ ನೀಡಲಾಯಿತು.

ಅಪರಾಹ್ನ ಅವಧಿಯಲ್ಲಿ ಸುಗಮಕಾರರಾದ ಪುಷ್ಪಾವತಿ ಇವರು ಮಕ್ಕಳು ಹೇಗೆ ಕಲಿಯುತ್ತಾರೆ ಅದರ ಗುಣಲಕ್ಷಣಗಳು ಹೇಗಿದೆ, ವೀಕ್ಷಣೆ,ಅನುಕರಣೆ, ಸಕ್ರಿಯವಾಗಿ ತೊಡಗಿಸಿಕೊಳ್ಳುವುದು ಇತ್ಯಾದಿ ವಿವರಗಳನ್ನು ಸವಿವರವಾಗಿ ತಿಳಿಸಿರುವರು. .ಮಕ್ಕಳ ಅನುಭವದಿಂದ ಶಾಶ್ವತ ಬದಲಾವಣೆಯೊಂದಿಗೆ ಅದಕ್ಕೆ ಜೀವನ ಕೌಶಲ ಸಾಮಾಜಿಕ ಶೈಕ್ಷಣಿಕ ಕೌಶಲ್ಯಗಳ ಬಗ್ಗೆ

ಸ್ಪಷ್ಟ ಪಡಿಸಿದರು ಜೊತೆಗೆ ಮಕ್ಕಳು ವಯೋಮಾನದ ಜನರ ನಡವಳಿಕೆಯನ್ನು ಅನುಕರಣೆ ಮಾಡುತ್ತಾರೆ. ಅದನ್ನ ಕಲಿಕೆ ಅಡಿಯಲ್ಲಿ ಹೇಗೆ ಕೊಂಡು ಹೋಗುತ್ತಾರೆ ಎಂಬುದನ್ನು ಚರ್ಚಿಸಿದರು. ಮುಖ್ಯವಾಗಿ ಮಕ್ಕಳಿಗೆ ಆಸಕ್ತಿ ಕುತೂಹಲ ಹೆಚ್ಚಿರುವುದರಿಂದ ಹೆಚ್ಚಿನ ಆದ್ಯತೆ ನೀಡುವುದು ಮಕ್ಕಳಲ್ಲಿ ಕಲ್ಪನಾಶಕ್ತಿ ಇರುವುದರಿಂದ ಶಿಕ್ಷಕರು ಕಲಿಕೆಯನ್ನು ಉತ್ತಮಪಡಿಸಲು ಪ್ರಯತ್ನಿಸುವುದು. ಎಂಬುದನ್ನು ತಿಳಿದುಕೊಂಡರು.




ಅಪರಾಹ್ನದ ಅವಧಿಯಲ್ಲಿ ಸುಗಮಕಾರರಾದ ಲಕ್ಷ್ಮಿಯವರು ಮಕ್ಕಳು ಕಲಿಯುವ ವಿಧಾನ, ಸರಳತೆಯಿಂದ ಸಂಕೀರ್ಣ, ಮಗುವಿನ ಸ್ವಂತ ಸಾಮ ಬಹುಸಂವೇದನಾ ಅನುಭವಗಳನ್ನು ಒದಗಿಸುವುದು, ಮಕ್ಕಳ ಕಲಿಕೆಯ ಮೇಲೆ ಪರಿಣಾಮ ಬೀರುವ ಅಂಶಗಳು ಇವುಗಳ ಬಗ್ಗೆ ಸ್ಪಷ್ಟಪಡಿಸಿ. ಈ ದಿನದ ತರಬೇತಿಯನ್ನು ಮುಕ್ತಾಯಗೊಳಿಸಲಾಯಿತು.

**********************************************************************************************

ದಿನಾಂಕ 8.3.2022 ಎರಡನೆ ದಿನದ ತರಬೇತಿಯು ಹಿಂದಿನ ದಿನದ ಹಿಮ್ಮಾಹಿತಿಯೊಂದಿಗೆ ಪಾರಂಭಗೊಂಡಿತ್ತು. ಪ್ರತಿಯೊಂದು ತಂಡದವರು ತಮಗೆ ನೀಡಿರುವ ಜವಾಬ್ದಾರಿಯನ್ನು ಉತ್ತಮವಾಗಿ ನಿರ್ವಹಿಸಿದರು.

ತರಬೇತಿಯ ನೋಡಲ್ ಅಧಿಕಾರಿಯಾದ ಶ್ರೀಮತಿ ಡಾ ಸುಮಂಗಲ ಮೇಡಂ ಇವರು Habit ಇದರ ಉಪಯುಕ್ತತೆಯನ್ನು ಅಕ್ಷರದ ಮೂಲಕ ಅರ್ಥೈಸಿದರು.




ಮೊದಲ ಅವಧಿಯನ್ನು ಸುಗಮಕಾರರಾದ ಪುಷ್ಪಾವತಿ ಇವರು ಅಭಿನಯಗೀತೆಯೊಂದಿಗೆ ಪ್ರಾರಂಭಿಸಿ ಶಾಲೆಯಲ್ಲಿ ಶಿಕ್ಷಕರ ಪಾತ್ರ ಏನು? ಎಂಬುದನ್ನು ಚರ್ಚೆಯ ಮೂಲಕ ಪ್ರಾರಂಭಿಸಿ ಶಿಕ್ಷಕರ ಪಾತ್ರ ಬಹಳ ಪ್ರಮುಖವಾದದ್ದು ಮಕ್ಕಳಿಗೆ ಬಹು ಸಂವೇದನಾ ಅನುಭವಗಳನ್ನು ಒದಗಿಸುವುದು, ಮಕ್ಕಳ ಬೆಳವಣಿಗೆ ಮಟ್ಟವನ್ನುಅರ್ಥ ಮಾಡುವುದು, ವಿಭಿನ್ನ ಬೋಧನಾ ವಿಧಾನಗಳನ್ನು ಬಳಸಿ ಕಲಿಕೆಗೆ ಅನುಕೂಲ ಮಾಡಿಕೊಡುವುದು. ಅನ್ವೇಷಣೆ, ಚರ್ಚೆ , ಸಂಭಾಷಣೆಗಳ ಮೂಲಕ ಚಟುವಟಿಕೆಗಳನ್ನು ಪುನರಾವರ್ತಿಸುವುದು. ಇತ್ಯಾದಿ ಅಂಶಗಳನ್ನು ಸ್ಪಷ್ಟಪಡಿಸಲಾಯಿತು.

ವಿರಾಮದ ಬಳಿಕ ಎರಡನೆಯ ಅವಧಿಯಲ್ಲಿ ಸುಗಮಕಾರರಾದ ಲಕ್ಷ್ಮಿಯವರು ಅಭಿನಯ ಗೀತೆ ಯೊಂದಿಗೆ ಪ್ರಾರಂಭಿಸಿ ಆರಂಭಿಕ ಸಾಕ್ಷರತೆ ಎಂದರೇನು?ಎಂಬುದನ್ನು ಪ್ರಶ್ನಿಸುತ್ತ ಮಕ್ಕಳ ಬೆಳವಣಿಗೆ ಮಟ್ಟವನ್ನು ,ಕಲಿಕಾ ಮಟ್ಟವನ್ನು, ಆರೋಗ್ಯಮಟ್ಟವನ್ನು ಮಗುವಿನ ಸಮಸ್ಯೆಗಳನ್ನು ಶಿಕ್ಷಕರು ಪೋಷಕರೊಂದಿಗೆ ಚರ್ಚಿಸಿ ಬಗೆಹರಿಸುವ ಬಗ್ಗೆ ಚರ್ಚಿಸಲಾಯಿತು. ಆರಂಭಿಕ ಸಾಕ್ಷರತೆಯಲ್ಲಿ ಮಕ್ಕಳು ಓದು ಮತ್ತು ಬರಹಗಾರರಾಗುವ ಮೊದಲು ಅವುಗಳ ಜ್ಞಾನಕೌಶಲ್ಯಗಳನ್ನು ಬೆಳೆಸಬೇಕು ಮಕ್ಕಳಲ್ಲಿ ಉತ್ತಮ ಭಾಷಾ ಕೌಶಲಕ್ಕೆ ಸಂಬಂಧಿಸಿದಂತೆ ಪುಸ್ತಕ ಮತ್ತು ಸಾಹಿತ್ಯದಲ್ಲಿ ಹೆಚ್ಚಿನ ಆಸಕ್ತಿಯನ್ನು ಹುಟ್ಟಿಸುವಂತೆ ನೋಡಿಕೊಳ್ಳುವುದು. ಮೌಖಿಕ ಭಾಷೆಯ ಬೆಳವಣಿಗೆಗೆ ಒತ್ತು ನೀಡುವ ಬಗ್ಗೆ ತಿಳಿಸಲಾಯಿತು. ಊಟದ ವಿರಾಮದ ಬಳಿಕ ಅಪರಾಹ್ನದ ಅವಧಿಯನ್ನು ಪ್ರಾರಂಭಿಸಲಾಯಿತು.

ಪ್ರಾರಂಭದಲ್ಲಿ ಸುಗಮಕಾರ ಪುಷ್ಪಾವತಿಇವರು ಕಥೆಯ 15 ಅಂಶಗಳು ಹೇಗಿದೆ ಎಂಬುದನ್ನು ಸ್ಪಷ್ಟಪಡಿಸಿದರು.




ಕಥೆಯನ್ನು ಹೇಳುವಾಗ 3 ಸುತ್ತುಗಳಲ್ಲಿ ಕಥೆಯನ್ನು ಯಾವರೀತಿ ಹೇಳುವುದು?ಹಂತಗಳು ಎಷ್ಟು? ಯಾವುದು? ಎಂಬುದನ್ನು ಮನದಟ್ಟು ಮಾಡಲಾಯಿತು.ಹಂತ 1 ರಲ್ಲಿ 1 ಎ, 1ಬಿ, 1ಸಿ ,1ಡಿ,1ಇ ಇದರ ಪರಿಕಲ್ಪನೆಯನ್ನು ತಿಳಿಸುತ್ತಾಸುತ್ತು 2 ರಲ್ಲಿ ಮತ್ತು ಸುತ್ತು 3 ರಲ್ಲಿ ಯಾವ ರೀತಿ ಕಥೆಹೇಳುವಿಕೆ ವಿಧಾನಗಳನ್ನು ಅರ್ಥವತ್ತಾಗಿ ಹೇಳಬೇಕು ಎಂಬುದರ ಬಗ್ಗೆ ತಿಳಿಸಲಾಯಿತು. ಅಪರಾಹ್ನದ 2 ನೇ ಅವಧಿಯಲ್ಲಿ ಸುಗಮಕಾರರಾದ ಲಕ್ಷ್ಮಿಯವರು ಭಾಷೆ ಮತ್ತು Emergent Literacy ಅಡಿಪಾಯ ವಿಷಯದ ಬಗ್ಗೆ ಚರ್ಚಿಸಿ ಕಥೆ ,ಶಬ್ದ ಕೋಶಗಳು, ನಿರೂಪಣೆಗಳು, ತೀರ್ಮಾನ, ಚಿಂತನೆ , ಪ್ರಶ್ನೆಗಳು ಸಂಭಾಷಣೆಯನ್ನು , ಮುದ್ರಣ ಮತ್ತು ಪುಸ್ತಕ ನಿರ್ವಹಣೆ ಮಾದರಿ ಪುಸ್ತಕದ ಬಳಕೆ ಬಗ್ಗೆ ಧ್ವನಿ ಅರಿವು, ಶಿಶುಗೀತೆ, ಸಂಬಂಧಿತ

ಆಟಗಳು ದೃಶ್ಯ ವಿಭೇದನೆ ಇತ್ಯಾದಿ ಅಂಶಗಳನ್ನು ಮನವರಿಕೆ ಮಾಡಲಾಯಿತು. ಒಟ್ಟಿನಲ್ಲಿ ಎರಡನೇ ದಿನದ ತರಬೇತಿ ಕಾರ್ಯಕ್ರಮ ಯಶಸ್ವಿಯಾಗಿ ಮುಕ್ತಾಯಗೊಂಡಿತು.

ಮೂರನೇ ದಿನದ 9.3.2022 ರಂದು ತರಬೇತಿಯು ಪ್ರಾರ್ಥನೆ, ಚಿಂತನೆ, ಹಿಂದಿನ ದಿನದ ತರಬೇತಿಯ ಹಿಮ್ಮಾಹಿತಿಯೊಂದಿಗೆ ಪ್ರಾರಂಭಗೊಂಡಿತು. ಪ್ರಾರಂಭದಲ್ಲಿ
ಸುಗಮಕಾರರಾದ ಲಕ್ಷ್ಮಿಯವರು ಭಾಷಾ ವಿಷಯದ ಬಗ್ಗೆ ಚರ್ಚಿಸುತ್ತ ಗಣಿತ ವಿಷಯಕ್ಕೆ ಸಂಬಂಧಪಟ್ಟ ಪರಿಕಲ್ಪನೆಯನ್ನು ಚಟುವಟಿಕೆ ಮೂಲಕ ಪ್ರಾರಂಭ.

**ಗಣಿತದ ಪೂರ್ವಪರಿಕಲ್ಪನೆ ಎಂದರೇನು?** ತರಗತಿ ಮಕ್ಕಳಿಗೆ ಪರಿಕಲ್ಪನೆಯ ಹಂತಗಳಾದ ದೊಡ್ಡದು, ಸಣ್ಣದು, ಆಕಾರ, ಗಾತ್ರ, ಬಣ್ಣದ ಕಲ್ಪನೆಯನ್ನು ತಿಳಿಯ ಪಡಿಸಲಾಯಿತು.ಹೋಲಿಕೆ, ಗುರುತಿಸುವಿಕೆ ಮಾದರಿ ರಚಿಸುವುದು, ಸಮಸ್ಯೆಗಳನ್ನು ಬಿಡಿಸುವುದು ಇವುಗಳ ಬಗ್ಗೆ ಸ್ಪಷ್ಟ ಪಡಿಸಲಾಯಿತು .Lkg Ukg ವಿಷಯದಲ್ಲಿ ಇರುವಂತ ಹವ್ಯತ್ಯಾಸಗಳ ಬಗ್ಗೆ ಪರಿಚಯಿಸಲಾಯಿತು.





ಎರಡನೇ ಅವಧಿಯಲ್ಲಿ ಸುಗಮಕಾರರಾದ ಪುಷ್ಪಾವತಿ ಇವರು ರಾಗಿ ,ಮುದ್ದೆ , ರುಚಿ ಚಟುವಟಿಕೆ ಮೂಲಕ ಶಿಬಿರಾರ್ಥಿಗಳನ್ನು ಕಲಿಕೆಯಕಡೆ ಕೇಂದ್ರಿಕರಿಸಿ ಅವಧಿಯನ್ನು ಪ್ರಾರಂಭಿಸಲಾಯಿತು. ರ,ಗ,ಸ,ದ ಅಕ್ಷರವನ್ನು ಪರಿಚಯಿಸುವಾಗ ಅನುಸರಿಸ ಬೇಕಾದ ಹಂತಗಳ ಬಗ್ಗೆ ತಿಳಿಸುತ್ತಾ 'ರ' ಅಕ್ಷರಕ್ಕೆ ಸಂಬಂಧಪಟ್ಟಂತೆ ಪ್ರಾಸಪದಗಳನ್ನು ಯಾವ ರೀತಿ ಹೇಳುವುದು ಹಾಗೂ ಕಥೆ ಹೇಳುವಾಗ 'ರ ' ಅಕ್ಷರಕ್ಕೆ ಸಂಬಂಧಿಸಿದಂತೆ ಕಥೆಯನ್ನು ಹೇಳುವ ಬಗ್ಗೆ, ಹೊಸಪದ, ಶಬ್ದ ಮಜ, ನನ್ನನ್ನುಹುಡುಕು, ಕಥೆ ಹೇಳುತ್ತೇನೆ , ಕೇಳು ಕಥೆ, ಹೊಸ ಪದಜಾಲ, ಚಪ್ಪಾಳೆ ನಿಗುರು ತಿಸುವುದು ಇತ್ಯಾದಿ ಹಂತಗಳನ್ನು ಸವಿಸ್ತಾರವಾಗಿ ಸ್ಪಷ್ಟಪಡಿಸಲಾಯಿತು.ಅಪರಾಹ್ನದ ಅವಧಿಯಲ್ಲಿ ಸುಗಮಕಾರರಾದ ಲಕ್ಷ್ಮಿಯವರು ಶಿಬಿರಾರ್ಥಿಗಳನ್ನು ತಂಡ ರಚಿಸಿ ಪ್ರತಿ ತಂಡಗಳಿಗೆ 'ರ' ಅಕ್ಷರಕ್ಕೆ ಒಂದೊಂದು ಹಂತಗಳನ್ನು ನೀಡಿ ಅದಕ್ಕೆ ಸರಿಯಾಗಿ ತಂಡದವರು ಗುಂಪಿನಲ್ಲಿ ಚರ್ಚಿಸಿ ಮಂಡನೆ ಮಾಡಲು ತಿಳಿಸಲಾಗಿತ್ತು.





ಮಂಡನೆ ಮಾಡಿದ ಬಳಿಕ ಪ್ರತಿ ಹಂತದಲ್ಲಿ ಕಂಡು ಬಂದಂತಹ ಉತ್ತಮ ಹಾಗೂ ಮುಂದಕ್ಕೆ ಸರಿಪಡಿಸಬೇಕಾದ ಅಂಶಗಳ ಬಗ್ಗೆ ತಿಳಿಸಲಾಯಿತು. ಈ ದಿನದ ತರಬೇತಿಯು ಉತ್ತಮವಾಗಿ ಮುಕ್ತಾಯಗೊಂಡಿತು.

*******************************************************************************************

ದಿನಾಂಕ 10.03.2022 ರಂದು ನಾಲ್ಕನೇ ದಿನದ ತರಬೇತಿಯ ವಿವರ ಪ್ರಾರಂಭದಲ್ಲಿ ಪ್ರಾರ್ಥನೆ, ಚಿಂತನೆ.ಹಿಂದಿನದಿನದ ವರದಿ ಮಂಡನೆ, ಭಿತ್ತಿಚಿತ್ರ ಪ್ರದರ್ಶನಮಾಡಿದ ಬಳಿಕ ಈ ದಿನದ ತರಬೇತಿಯನ್ನು ಪ್ರಾರಂಭಿಸಲಾಯಿತು.





ಮೊದಲಿನ ದಿನ ಪ್ರಾಯೋಗಿಕವಾಗಿ ತಂಡಗಳಿಗೆ ನೀಡಿದಂತಹ ವಿಷಯಗಳನ್ನು ಪ್ರತಿ ತಂಡದವರು ಮಂಡಿಸುವಂತೆ ತಿಳಿಸಲಾಯಿತು.




ಮೊದಲನೇ ತಂಡ ತಿಳಿಯೋಣ ಹೊಸಪದ ,ನನ್ನ ಹುಡುಕು, 2 ನೇ ತಂಡ ಶಬ್ದ ಮಜ, 3 ನೇ ತಂಡ ನಾನು ಕಥೆಹೇಳುವೆ, ಕೇಳೋಣ ಕಥೆ 4ನೇ ತಂಡ ಪದಜಾಲ,5 ನೇ ತಂಡ ಕೇಳೋಣಕಥೆ, ನನ್ನನ್ನುಹುಡುಕು 6ನೇತಂಡ ತಿಳಿಯೋಣ ಹೊಸಪದ, ಧ್ವನಿಗುರುತಿಸುವುದು ,ಆಕಾರಗುರುತಿಸುವಿಕೆ ನಾನು ಕಥೆ ಹೇಳುವೆ ಈ ವಿಷಯಕ್ಕೆ ಪೂರಕವಾಗಿ ತಂಡದವರು ಅಕ್ಷರಕ್ಕೆ ಸಂಬಂಧಿಸಿದಂತೆ ಚಟುವಟಿಕೆಗಳನ್ನು ಪ್ರಸ್ತುತಪಡಿಸಿದರು .




ಸುಗಮಗಾರರಾದ ಪುಷ್ಪಾವತಿ ಹಾಗೂ ಲಕ್ಷ್ಮಿಯವರು ಎರಡು ತಂಡಗಳ ಚಟುವಟಿಗಳು ವೀಕ್ಷಿಸಿ ನಂತರ ಚರ್ಚಿಸುತ್ತಾ ತರಗತಿಯನ್ನು ಚೆನ್ನಾಗಿಯಾವ ರೀತಿ ನಿರ್ವಹಿಸಬಹುದು ಎಂಬುದಾಗಿ ಮಾರ್ಗದರ್ಶನ ನೀಡಿ ಭಾಗವಹಿಸಿದವರು ಎಲ್ಲರಿಗೂ ಅಭಿನಂದನೆಯನ್ನುತಿ ಳಿಸಲಾಯಿತು .

ತರಗತಿಯಲ್ಲಿ ಅಳವಡಿಸ ಬಹುದಾದ 5 ಕಲಿಕಾ ಮೂಲೆ ಗಳ ಬಗ್ಗೆ ಪರಿಚಯಿಸಿ ಅವುಗಳನ್ನು ಯಾವ ರೀತಿಯಲ್ಲಿ ಬಳಸ ಬಹುದು ಎಂಬುದಾಗಿ ಸ್ಪಷ್ಟ ಪಡಿಸಿ ಈ ದಿನದ ತರಬೇತಿಯನ್ನು ಮುಕ್ತಾಯಗೊಳಿಸಲಾಯಿತು.

ಐದನೇ ದಿನದ ವರದಿ ದಿನಾಂಕ 11.03.2022

ಆರಂಭದಲ್ಲಿ ನಾಲ್ಕನೇ ದಿನದ ವರದಿ ಮಂಡನೆ,ಚಿಂತನೆ,ಬಿತ್ತಿಚಿತ್ರ ಪ್ರದರ್ಶನ ಮಾಡಲಾಯಿತು.





ಮೊದಲ ಅವಧಿಯಲ್ಲಿ ಸುಗಮಕಾರರಾದ ಲಕ್ಷ್ಮಿಯವರು ಪಠ್ಯಕ್ರಮಗಳಲ್ಲಿ ಕಂಡುಬರುವ 9Theme ಗಳ ಬಗ್ಗೆ ಸಂಕ್ಷಿಪ್ತವಾಗಿ ಮಾಹಿತಿಯನ್ನು ನೀಡಿರುವರು





ಎರಡನೇ ಅವಧಿಯಲ್ಲಿ ಸುಗಮಕಾರರಾದ ಪುಷ್ಪಾವತಿಯವರು ಪರ್ಯಾಯ ಶೈಕ್ಷಣಿಕ ಯೋಜನೆಯ ಬಗ್ಗೆ ಮಾಹಿತಿ ನೀಡುತ್ತಾ ವೇಳಾಪಟ್ಟಿಯನ್ನು ಯಾವ ರೀತಿ ತಯಾರಿಸುವುದು ಎಂಬುದನ್ನು ತಂಡಗಳಾಗಿ ಮಾಡಿ ಪ್ರತಿ ತಂಡಗಳಿಗೆ ವಿಷಯುವನ್ನು ತಿಳಿಸಲಾಯಿತು

ಅಪರಾಹ್ನದ ಅವಧಿಯಲ್ಲಿ ಶಿಬಿರಾರ್ಥಿಗಳು ವೇಳಾ ಪಟ್ಟಿಯ ನ್ನುತಂಡವಾರು ಮಂಡಿಸುತ್ತಾ ಸುಗಮಕಾರರು ವೇಳಾಪಟ್ಟಿಯ ಬಗ್ಗೆ ಸ್ಪಷ್ಟ ಪಡಿಸಿದರು.

 

ತದನಂತರ ಸಾಪಲ್ಯ ಪರೀಕ್ಷೆಯನ್ನುಶಿಬಿರಾರ್ಥಿಗಳಿಗೆ ನೀಡಿ ಪೂರ್ವ ಮತ್ತು ಸಾಫಲ್ಯಪರೀಕ್ಷೆಯಲ್ಲಿ ಶಿಬಿರಾರ್ಥಿಗಳುಗಳಿಸಿದ ಉತ್ತರ ಗಳನ್ನು ಪರಿಶೀಲಿಸಿ ವ್ಯತ್ಯಾಸಗಳನ್ನು ಗಮನಿಸಿ ಮಾಹಿತಿಯನ್ನುನೀಡಿ,ಸಮಾರೋಪದ ಕಾರ್ಯಕ್ರಮವನ್ನು ನಡೆಸಿ ಕೊನೆಯ ದಿನದ ತರಬೇತಿ ಕಾರ್ಯಕ್ರಮ ಯಶಸ್ವಿಯಾಗಿ ಮುಗಿಸಲಾಯಿತು.